‘ಇದೊಂದು ಬುದ್ಧಿ ಇಲ್ಲದ ಪ್ರಹಸನದಂತಿದೆ’ ಎಂದು ಪದೇ ಪದೇ ಗೊಣಗಿಕೊಂಡ.

ತುಂಬಾ ದಿನಗಳ ನಂತರ ಅವನಿಗೆ ಮಸೀದಿಗೆ ಹೋಗಬೇಕೆನಿಸಿತು. ವಿಚಿತ್ರವೆಂದರೆ ಆ ಎರಡು ದಿನಗಳೂ ಅವನಿಗೆ ಮನೋರಮ ನೆನಪಿಗೆ ಬರಲಿಲ್ಲ. ಯುನಿವರ್ಸಿಟಿ ಪ್ರದೇಶವೆಲ್ಲಾ ಶತ್ರು ಶಿಬಿರದಂತಿತ್ತು. ಲಾಠಿಗಳಿಂದ ತನಗಾಗಿ ಇನ್ನೂ ರಸ್ತೆಯ ಮೇಲೆ ಹುಡುಕುತ್ತಿರುವಂತೆ ಭಾಸವಾಗತೊಡಗಿತು.

ಎರಡು ವಾರಗಳು ಕಳೆದವು. ಬೆಳಿಗ್ಗೆಯೇ ಪತ್ರಿಕಾ ಕಚೇರಿಯಿಂದ ಕರೆ ಬಂತು. ಪತ್ರಿಕೆಯ ನೌಕರರು ಮುಷ್ಕರ ನಡೆಸಲಿದ್ದಾರೆಂದು. ಬರಬೇಕಾದ ಅರಿಯರ್ಸ್‌ಗಾಗಿ. ಸಲೀಮನಿಗೆ ಪತ್ರಿಕೆಯ ಕಚೇರಿ ನೆನಪಿಗೆ ಬಂತು. ಕಾಗದದ ವಿಚಿತ್ರವಾದ ವಾಸನೆ ನೆನಪಿಗೆ ಬಂತು. ತಾನು ಬರೆದ ವರದಿ, ಹೆಣೆದಿದ್ದ ಚಂದನೆಯ ಪದಗಳು – ದೇಹಕ್ಕೆ ಅಂಟಿಕೊಂಡ ಪರಿಮಳದಂತೆ ಆ ವಾರ್ತೆಗಳು, ತನ್ನ ಅದ್ಭುತ ಸಂಪತ್ತನ್ನು ದೋಚಿಕೊಂಡಂತೆ.

ಕಚೇರಿಯ ಬಳಿ ನೂರಕ್ಕೂ ಹೆಚ್ಚು ಜನ ಸೇರಿದ್ದರು. ಸಲೀಮನ ರೂಪ ವಿಚಿತ್ರವಾಗಿತ್ತು. ಆದರೆ ಅದು ನಿರಶನ ವಾತಾವರಣವಾದ್ದರಿಂದ ಯಾರೂ ಅವನಲ್ಲಿಯ ಬದಲಾವಣೆಯನ್ನು ಗಮನಿಸಿರಲಿಲ್ಲ. ಉಮಾ ರಾವ್ ಎಂಬ ಗೆಳೆಯ ಮಾತ್ರ ಪ್ರೀತಿಯಿಂದ ಭುಜದ ಮೇಲೆ ಕೈಹಾಕಿ, “ಏನಾಯಿತು ಸಲೀಮ್, ಎನಿ ಪ್ರಾಬ್ಲಂ” ಎಂದ. ಸಲೀಮನಿಗೆ ದುಃಖ ಉಮ್ಮಳಿಸಿ ಬಂದು ಅಳುನುಂಗಿಕೊಳ್ಳುತ್ತಾ, “ಏನೂ ಇಲ್ಲ, ಏನೂ ಇಲ್ಲ” ಎಂದು ಎರಡು ಸಲ ಗೊಣಗಿದ. ಎಲ್ಲರೂ ರಸ್ತೆಯ ಮೇಲೆ ಕೂತರು.

ಮಧ್ಯಾಹ್ನ ನಾಲ್ಕು ಗಂಟೆಗೆ ಎಲ್ಲಿಂದಲೋ ಹಾರುತ್ತಾ ಬಂದ ಮಾಯಾಪಕ್ಷಿಯಂತೆ, ಮನೋರಮಾ ಪಕ್ಕಕ್ಕೆ ಬಂದು ಕೂತಳು. ತುಟಿಗಳ ಮೇಲೆ ತೆಳುವಾದ ನಗೆ. ಆಕೆಯ ಆಗಮನ ಅವನಿಗೆ ಇರಿಸು ಮುರುಸಾಯಿತು. ಆಚೆ ಹೋಗಿ ಟೀ ಕುಡಿದು ಬರೋಣ ಎಂದಳು. ಎದ್ದು ಚೌರಾಸ್ತಾ ಕಡೆ ನಡೆದರು.

“ಈ ಧರಣಿ, ಮುಷ್ಕರಗಳು ಇನ್ನು ಸಾಕು. ಎಲ್ಲಾದರೂ ಹೋಗೋಣ” ಎಂದಳು. ಯುನಿವರ್ಸಿಟಿಯ ಘಟನೆ ಕುರಿತು ಏನೂ ಮಾತನಾಡದಿರವುದು ಸಲೀಮನಿಗೆ ಆಶ್ಚರ್ಯ ತಂದಿತ್ತು. ನಂತರ ಅವನಿಗೆ ಬೆಚ್ಚಿಬೀಳಿಸಿದ್ದು, “ಹೌದು ಆ ದಿನ ನಿನಗೆ, ಪಿ.ಎಸ್.ಗೆ ಏನೋ ಗಲಾಟೆಯಾಯ್ತಂತೆ, ಎಮ್ಮೆಸ್‌ಆರ್‌ನನ್ನು ನೀನು ಛಟೀರ್ ಎನಿಸುತ್ತಿರುವಾಗ ಬಂದೆ. ಏನು ನಡಿತಿದೆ ಅಂತ ಭಯ ಆಯ್ತು.” ಟೀ ಕುಡಿಯುತ್ತಾ ಹೇಳಿದಳು. ಸಲಿಮನಿಗೆ ಉಸಿರು ನಿಂತು ಹೋದಂತಾಯಿತು.“ಎಮ್ಮೆಸ್ಸಾರ್ ಒಂದು ವಾರ ಕ್ಲಾಸ್‌ಗೆ ಬಂದಿಲ್ಲ. ವಿಚಿತ್ರ ಶಾಕ್ ಆಗಿದೆ ಅವನಿಗೆ. ಹೌದು ಏನಿದು ಗೆಟಪ್? ಬ್ರೂಸ್‌ವಿಲ್ಲೀಸ್‌ನಂತೆ.”

“ಹಾಗೆ ನೆಕ್ಲೆಸ್ ರೋಡ್ ಕಡೆ ಹೋಗೋಣ ನಡಿ” ಎಂದು ಎಬ್ಬಿಸಿದಳು. ನೆಕ್ಲೆಸ್ ರೋಡ್ ಜನರಿಂದ ತುಂಬಿತ್ತು. ನಿರ್ಜನ ಪ್ರದೇಶದ ಒಂದು ಮೂಲೆಗೆ ಕರೆದೊಯ್ದಳು. ಸಲೀಮನಿಗೆ ಸಿನಿಮಾ ಥಿಯೇಟರ್, ಬೆಚ್ಚನೆ ಸ್ಪರ್ಶ ನೆನಪಿಗೆ ಬಂದವು. ದುಃಖ ಮರೆತು ಹೊಸ ಉತ್ಸಾಹವನ್ನು ಧರಿಸಿದ. ಯಾರೂ ನೋಡದ ಏಕಾಂತದಲ್ಲಿ ಮನೋರಮಳನ್ನು ಚುಂಬಿಸಿದ ಸಲೀಮ್. ಮೃದುವಾಗಿ, ಮೆತ್ತಗೆ ಸಾವಿನಂತೆ, ಹುಟ್ಟಿನಂತೆ, ಕನಸಿನಂತೆ ಮನೋರಮಳ ಮುಖದ ಮೇಲೆ ಮಂದಸ್ಮಿತ. ಬಹುಶಃ ಯಾವ ದುಃಖವೂ ಸೋಕದ ಸ್ಥಿತಿಯಲ್ಲಿ.

ಜನರ ಗಲಾಟೆ ಹೆಚ್ಚಾಗಿ ನೆಕ್ಲೆಸ್ ರೋಡ್ ಸಣ್ಣ ಸಂತೆಯಾಗಿ ಬದಲಾಯಿತು. ವಾಹನಗಳ ಸದ್ದು, ಜನರ ಗಲಾಟೆ ಮುಗಿಲು ಮುಟ್ಟಿತು. ಕತ್ತಲಲ್ಲಿ ಅವರಿಬ್ಬರೂ ಒಂದೇ ಆಗಿ, ಗಾಢ